# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ , ಮೈಸೂರು

| | |
|---|---|
| **Com.O.S** | 43/2020 |

| | | | | | |
|---|---|---|---|---|---|
| **ಸಾಕ್ಷಿದಾರರ ಹೆಸರು** | | Sri Santhanam K G | | **ಪ್ರಮಾಣ ಮಾಡಿಸಿದದಿನಾಂಕ** | |
| **ತಂದೆಯ ಹೆಸರು** | | Late K S Govindarajan | | 20.06.2022 | |
| **ವಯಸ್ಸು** | | 57 | **ವರ್ಷ** | | |
| **ವೃತ್ತಿ** | | Administrative Officer, united India Insurance Co.Ltd. | | **PW**: | 2 |
| **ವಾಸಸ್ಥಳ** | | **Bengaluru**. | | | |

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಮೂಲತಃ ಈ ದಾವೆಯು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿ ಇದೆ. ಸದರಿ ದಾವೆ ನಂ. 358/04 ಇತ್ತು ಎಂದರೆ ಸರಿ ಇದೆ. ಬೆಂಗಳೂರಿನಲ್ಲಿ ನಡೆದ ದಾವೆ ಆರ್ಡರ್ ಶೀಟ್ ನ್ನು ಹಾಜರುಪಡಿಸುತ್ತೇನೆ. ಸದರಿ ದಾವೆ ನಂ. 358/04 Dismissed for default ಆಗಿತ್ತು ಎಂದರೆ ಸರಿ ಇದೆ. ನನಗೆ ದಾವೆ ಯಾವಾಗ Dismissed for default ಆಗಿತ್ತು ಮತ್ತು ಯಾವಾಗ ದಾವೆ restoration ಅಗಿದೆ ಎಂದು ಹೇಳಲು ಆಗುವುದಿಲ್ಲ. ಕಾಲಮಿತಿ ಮೀರಿದ ನಂತರ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಯು ಪಿ ಎಸ್ ಯನ್ನು ನಾವು ಸಿಂಗಾಪುರದಿಂದ import ಮಾಡಿಕೊಳ್ಳುತ್ತಿದ್ದೆವು ಎಂದರೆ ಸರಿ ಇದೆ. ನಾವು ಯು.ಪಿ.ಎಸ್ ಫೋಟೋಗಳನ್ನು ತೆಗೆದುಕೊಂಡಿದ್ದೆವು. ಯು ಪಿ ಎಸ್ import ಮಾಡಿಕೊಳ್ಳುವಾಗ ಅದು ಪ್ಯಾಕ್ ಮಾಡಿ ಇತ್ತು ಎಂದರೆ ಸರಿ ಇದೆ. ಫೋಟೋ ತೆಗೆದುಕೊಳ್ಳುವಾಗ ಪ್ಯಾಕ್ open ಅಗಿರುವುದಿಲ್ಲ. ನಾನು ಪ್ಯಾಕ್ open ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ಯಾಕ್ open ಮಾಡದೆ ಫೋಟೋ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಸಿಂಗಾಪುರದಿಂದ ಭಾರತಕ್ಕೆ ಗೂಡ್ಸ್ ವಿಮಾನ ಅಥವಾ ಹಡಗಿನ ಮುಖಾಂತರ ಬಂದಿದೆಯಾ ಅಥವಾ ಇಲ್ಲ ಎಂಬುದು ನನಗೆ ಮಾಹಿತಿ ಇಲ್ಲ. ವಸ್ತು ಸಾಗಾಣಿಕೆ ಮಾಡುವಾಗ original packing ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. External packing ಸರಿಯಾಗಿ ಇತ್ತು ಎಂದರೆ ಸರಿ ಇದೆ. ಸರ್ವೆ ವರದಿಯಲ್ಲಿ packing was made adequate and customary ಇದೆ ಎಂದು ಬರೆದಿದ್ದಾರೆ ಎಂದರೆ ಸರಿ ಇದೆ. ಸರ್ವೆ ಮಾಡುವಾಗ ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿದ್ದೀರ ಎಂದು ಕೇಳಿದ್ದಕ್ಕೆ ಕೊಟ್ಟಿದ್ದೀರ ಎಂದರೆ ಸರ್ವೆ ಮಾಡುವಾಗ ಲಾರಿ ಚಾಲಕ ಹಾಜರಿದ್ದರು ಎಂದು ನುಡಿಯುತ್ತಾರೆ. ಕೇಸಿನ ಸಂಬಂಧಪಟ್ಟ ಸರ್ವೆ ರಿಪೂರ್ಟ್ ದಾಖಲೆಯನ್ನು ಹಾಜರುಪಡಿಸಿರುತ್ತೇವೆ. ಪ್ರತಿವಾದಿಯರು consignment ಗೆ ಯಾವುದೇ ಡ್ಯಾಮಾಜ್ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆಯರ್ ಹಾಗೂ ಇನ್ಸೂರನ್ಸ್ ಕಂಪನಿಯವರೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ನಾವು ಮೆಶಿನ್ Technical Person ಮುಖಾಂತರ ಪರಿಶೀಲಿಸಿದ್ದೇವೆ. ಫೋಟೋ ತೆಗೆಯಲು ಪ್ಯಾಕ್ open ಮಾಡಿದ್ದರಿಂದ ಡ್ಯಾಮಾಜ್ ಆಗಿದೆ ಎಂದರೆ ಸರಿಯಲ್ಲ. 1 ನೇ ವಾದಿಯ ತಪ್ಪನ್ನು ಮುಚ್ಚಿಡಲು External packing of

consignments ಸರಿಯಾಗಿದೆ ಎಂದು ವರದಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವೆ ಹಣವನ್ನು ಕೊಡಲು ಬಾಧ್ಯರು ಎಂದರೆ ಸರಿಯಲ್ಲ.

ವಾದಿ 1 ಇವರಿಗೆ ನಾವು ಹಣ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ನಮಗೆ ಸಬ್ ರೋಗೇಶನ್ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು.